# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1329** |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | **22-08-2025** |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸ್ಥಾಪಿತವಾಗಿರುವ ಗೊಲ್ಲರಹಟ್ಟಿ ಗ್ರಾಮಗಳಲ್ಲಿ ವಾಸಿಸುವ ಕಾಡುಗೊಲ್ಲರು ಹಾಗೂ ಗೊಲ್ಲರು ಸಾಮಾಜಿಕವಾಗಿ- ಶೈಕ್ಷಣಿಕವಾಗಿ -ಆರ್ಥಿಕವಾಗಿ ಅತೀ ಹಿಂದುಳಿದಿದ್ದು ಈ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ ಜನರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಗೊಲ್ಲರಹಟ್ಟಿ ಗ್ರಾಮಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಗ್ರಾಮಗಳಲ್ಲಿ ವಾಸಿಸುವಂತಹ ಕಾಡುಗೊಲ್ಲರು ಹಾಗೂ ಗೊಲ್ಲರು ಮೂಲಭೂತ ಸೌಕರ್ಯಗಳಿಲ್ಲವೆಂಬುದರ ಬಗ್ಗೆ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯಲ್ಲಿ ಯಾವುದೇ ಕೋರಿಕೆಗಳು ಸ್ವೀಕೃತಗೊಂಡಿರುವುದಿಲ್ಲ.<br><br>ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯಲ್ಲಿ ಪ್ರತ್ಯೇಕವಾಗಿ ಗೊಲ್ಲರ ಹಟ್ಟಿ ಗ್ರಾಮಗಳಿಗಾಗಿಯೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಯಾವುದೇ ಪ್ರತ್ಯೇಕ ಯೋಜನೆಗಳು ಇರುವುದಿಲ್ಲ. ಗ್ರಾಮ ಪಂಚಾಯತಿಗಳು ಕೇಂದ್ರ ಹಾಗೂ ರಾಜ್ಯ ಹಣಕಾಸು ಆಯೋಗದ ಅನುದಾನ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಲಭ್ಯವಾಗುವ ಅನುದಾನಕ್ಕೆ ತಕ್ಕಂತೆ ಗ್ರಾಮ ಸಭೆಗಳಲ್ಲಿ ಗುರುತಿಸುವಂತಹ ಮೂಲಭೂತ ಸೌಕರ್ಯಗಳನ್ನು ಸೃಜಿಸುವ ಕಾಮಗಾರಿಗಳನ್ನು ಕೈಗೊಂಡು ಕ್ರಮವಹಿಸಲಾಗುತ್ತಿದೆ. |
| (ಆ) | ಈ ಸಮುದಾಯವು ರಾಜಕೀಯವಾಗಿಯೂ ಹಿಂದುಳಿದಿದ್ದು, ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕಾಡುಗೊಲ್ಲ ಸಮುದಾಯಕ್ಕೆ ಯಾವುದೇ ಅವಕಾಶ ನೀಡದೆ ನಾಗರೀಕತೆ ಸಮಾಜದಲ್ಲಿ ಎಲ್ಲರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ನೀಡಲು ರಾಜ್ಯ ಸರ್ಕಾರ ಬದ್ದವಾಗಿದ್ದು, ಕಾಡುಗೊಲ್ಲ ಸಮುದಾಯದ ಜನರಿಗೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ರಾಜಕೀಯ ಮೀಸಲಾತಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ, (ಪ್ರತಿಯನ್ನು ನೀಡುವುದು) | ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘದ ದಿನಾಂಕ:11.12.2023ರ ಮನವಿಯು ಸರ್ಕಾರದಲ್ಲಿ ಸ್ವೀಕೃತಗೊಂಡಿರುತ್ತದೆ. (ಪ್ರತಿ ಲಗತ್ತಿಸಿದೆ).<br><br>ಕಾಡುಗೊಲ್ಲ ಸಮುದಾಯದ ಜನರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಅನುವಾಗುವಂತೆ ಹಿಂದುಳಿದ **ಪ್ರವರ್ಗ–ಎ** ರಡಿ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| (ಇ) | ಬಂದಿದ್ದಲ್ಲಿ, ಕ್ರಮ ಕೈಗೊಳ್ಳದೆ ಇರಲು ಕಾರಣಗಳೇನು? | ಉದ್ಭವಿಸುವುದಿಲ್ಲ. |

**ಸಂಖ್ಯೆ:** ಗ್ರಾಅಪಂರಾ 128 ಜಿಪಸ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ನೊ. ನಂ. ಡಿಆರ್‌ಬಿ4/ಎಸ್‌ಓಆರ್/215/2020-2021

Reg. No. DRB4/SOR/215/2020-2021

# ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ (ರಿ)

# KARNATAKA STATE KADUGOLLARA SANGHA (R)

ಕೇಂದ್ರ ಕಛೇರಿ : ನಂ. 2, ದೊಡ್ಡಣ್ಣ ಬಿಲ್ಡಿಂಗ್, ಅನಿಬೆಸೆಂಟ್ ಸ್ಕೂಲ್ ಅಡ್ಡರಸ್ತೆ, ದೊಡ್ಡಗೊಲ್ಲರಹಟ್ಟಿ, ಮಾಗಡಿ ಮುಖ್ಯರಸ್ತೆ, ನೈಸ್‌ರೋಡ್ ಜಂಕ್ಷನ್, ವಿಶ್ವನೀಡಂ ಅಂಚೆ, ಯಶವಂತಪುರ ಹೋಬಳಿ, ಬೆಂಗಳೂರು – 560 091.

Head Office: No. 2, Dodddanna Building, Anibesant School Cross Road, Dodda Gollarahatti, Magadi Main Road, Nice Road Junction, Vishwaneedam Post, Yeshwanthapura Hobli, Bengaluru - 560 091.

E-mail : krkgsangha@gmail.com

ಅಧ್ಯಕ್ಷರು / President
ಶ್ರೀ ರಾಜಣ್ಣನವರು / Sri Rajanna
Mob.: 97413 35250

ಪ್ರಧಾನ ಕಾರ್ಯದರ್ಶಿ / General Secretary
ಶ್ರೀ ದೇವರಾಜು ಎಂ.ಎಸ್. / Sri Devaraju M.S
Mob.: 99450 77979

Ref.:

Date.:
11.12.2023

ರವರಿಗೆ,

ಸನ್ಮಾನ್ಯ ಶ್ರೀ. ಸಿದ್ದರಾಮಯ್ಯ ರವರು

ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ,

ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಕಾಡುಗೊಲ್ಲ / ಹಟ್ಟಿಗೊಲ್ಲ ಜಾತಿಗಳನ್ನು ಸ್ಥಳೀಯ ಸಂಸ್ಥೆಗಳ (ಜಿ.ಪಂ. ತಾ.ಪಂ ಹಾಗೂ ಗ್ರಾ.ಪಂ) ಚುನಾವಣೆಗೆ ಸ್ಪರ್ಧಿಸಲು ಅನುವಾಗುವಂತೆ ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ ...-5 ಜಿಪಸ 95(1), ಬೆಂಗಳೂರು, ದಿನಾಂಕ: 13.01.1995 ರಂತೆ ಚುನಾವಣಾ ಗೆಜೆಟ್‌ನಲ್ಲಿ ಹಿಂದುಳಿದ ವರ್ಗ ಪ್ರವರ್ಗ-ಎ&ಬಿ (ಬಿಸಿಎಂ-ಎ) ಚುನಾವಣಾ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ.

ಉಲ್ಲೇಖ: 1] ಚುನಾವಣಾ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಕಡತದ ಸಂಖ್ಯೆ: ಆರ್.ಡಿ.ಪಿ.ಆರ್ 107 ಝಡ್.ಪಿ.ಎಸ್ 2023, ಕಂಪ್ಯೂಟರ್ ಸಂಖ್ಯೆ: 1044793.

2] ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಹಿಂವಕ 328 ಬಿಸಿಎ 2017, ದಿ: 29.01.2018

3] ಸರ್ಕಾರದ ಆದೇಶ ಸಂಖ್ಯೆ: ಹಿಂವಕ 185 ಬಿಸಿಎ 2018, ದಿನಾಂಕ: 13.07.2018

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕಾಡುಗೊಲ್ಲ ಜನಾಂಗವು ಕರ್ನಾಟಕದ ಅತೀ ಹಾಗೂ ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾಗಿದ್ದು, ಈ ಬುಡಕಟ್ಟು ಜನಾಂಗವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಹಾಗೂ ಇಂದಿನವರೆಗೂ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿರುವ ಜನಾಂಗವಾಗಿದೆ.

ಮುಖ್ಯಮಂತ್ರಿಯವರ ಸಚಿವಾಲಯ DEC 2023 ಸಂಖ್ಯೆ 000021

ರಿ. ಸಂ. ಡಿಆರ್‌ಬಿ4/ಎಸ್‌ಓಆರ್/215/2020-2021 Reg. No. DRB4/SOR/215/2020-2021

ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ (ರಿ)

KARNATAKA STATE KADUGOLLARA SANGHA (R)

ಕೇಂದ್ರ ಕಛೇರಿ : ನಂ. 2, ದೊಡ್ಡಣ್ಣ ಬಿಲ್ಡಿಂಗ್, ಅನಿಬೆಸೆಂಟ್ ಸ್ಕೂಲ್ ಕ್ರಾಸ್ ರಸ್ತೆ, ದೊಡ್ಡಗೊಲ್ಲರಹಟ್ಟಿ, ಮಾಗಡಿ ಮುಖ್ಯರಸ್ತೆ, ನೈಸ್‌ರೋಡ್ ಜಂಕ್ಷನ್, ವಿಶ್ವನೀಡಂ ಅಂಚೆ, ಯಶವಂತಪುರ ಹೋಬಳಿ, ಬೆಂಗಳೂರು - 560 091.

Head Office: No. 2, Dodddanna Building, Anibesant School Cross Road, Dodda Gollarahatti, Magadi Main Road Nice Road Junction, Vishwaneedam Post, Yeshwanthapura Hobli, Bengaluru - 560 091.

E-mail : krkgsangha@gmail.com

ಅಧ್ಯಕ್ಷರು / President
ಶ್ರೀ ರಾಜಣ್ಣನವರು / Sri Rajanna
Mob.: 97413 35250

ಪ್ರಧಾನ ಕಾರ್ಯದರ್ಶಿ / General Secretary
ಶ್ರೀ ದೇವರಾಜು ಎಂ.ಎಸ್. / Sri Devaraju M.S.
Mob.: 99450 77979

Ref.:

Date.:

ಸದರಿ ಜನಾಂಗವು ಕರ್ನಾಟಕ ರಾಜ್ಯದ 12 ಜಿಲ್ಲೆಗಳ ಸುಮಾರು 40 ತಾಲ್ಲೂಕುಗಳಲ್ಲಿ ತಮ್ಮದೇ ಆದ ಬುಡಕಟ್ಟು ಸಂಸ್ಕೃತಿಯೊಂದಿಗ ಸುಮಾರು 1250 ಕ್ಕೂ ಹೆಚ್ಚಿನ ಗೊಲ್ಲರಹಟ್ಟಿಗಳಲ್ಲಿ ವಾಸವಾಗಿರುವುದನ್ನು ಕಾಣಬಹುದಾಗಿದೆ. ಈ ಮೊದಲು "ಕಾಡುಗೊಲ್ಲ" "ಹಟ್ಟಿಗೊಲ್ಲ" ಜಾತಿಗಳನ್ನು ಪ್ರವರ್ಗ-1 ರಡಿಯಲ್ಲಿ ಬರುವ ಗೊಲ್ಲ ಎಂಬದಾಗಿ ಗುರುತಿಸಲಾಗುತ್ತಿತ್ತು. ಹಾಗೆಯೇ "ಗೊಲ್ಲ" ಎಂಬುದಾಗಿ ಜಾತಿ ಪ್ರಮಾಣ ಪತ್ರವನ್ನು ನೀಡಲಾಗುತ್ತಿತ್ತು.

ಮುಂದುವರೆದು ಸಮುದಾಯದ ಮುಖಂಡರು ನಮ್ಮ ಸಮುದಾಯದ ಆಚಾರ, ವಿಚಾರಗಳು, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ವಿವರಿಸುತ್ತ ತಮ್ಮ ಸಮುದಾಯದ ಪ್ರತ್ಯೇಕ ಅಸ್ತಿತ್ವವನ್ನು ಪ್ರತಿಪಾದಿಸಿ, ನಮ್ಮಗಳನ್ನು ಕಾಡುಗೊಲ್ಲ ಎಂಬುದಾಗಿ ಗುರುತಿಸಲು ಸರ್ಕಾರಕ್ಕೆ ಮನವಿಯನ್ನು ಮಾಡಲಾಗಿದ್ದು, ಸರ್ಕಾರವು ಮೈಸೂರು ವಿಶ್ವವಿದ್ಯಾಲಯದ ಮಾನವ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಅನ್ನಪೂರ್ಣಮ್ಮ ರವರಿಂದ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡು, ಸದರಿಯವರು ಸರ್ಕಾರಕ್ಕೆ ಸಲ್ಲಿಸಿದ ವರದಿಯ ಮೇರೆಗೆ ಘನ ಸರ್ಕಾರವು ತನ್ನ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002 ರಲ್ಲಿ ಭಾರತದ ಸಂವಿಧಾನದ ಅನುಚ್ಛೇದ 15(4) ರಂತೆ ಮತ್ತು 16(4) ರಂತೆ ಪ್ರವರ್ಗ-1 ರ ಜಾತಿಗಳ ಪಟ್ಟಿಯಲ್ಲಿ ಉಲ್ಲೇಖ-1 ರ **ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಹಿಂವಕ 328 ಬಿಸಿಎ 2017, ದಿನಾಂಕ: 29.01.2018** ರಂತೆ ಕ್ರಮ ಸಂಖ್ಯೆ 86 (ಡಬ್ಲ್ಯು.) ನಂತರದ ಕ್ರಮ ಸಂಖ್ಯೆ: 86(ಎಕ್ಸ್)ರಲ್ಲಿ **"ಕಾಡುಗೊಲ್ಲ"** 86(ವೈ)ರಲ್ಲಿ **"ಹಟ್ಟಿಗೊಲ್ಲ"** ಎಂಬ ಪರ್ಯಾಯ ಪದಗಳನ್ನು ಸೇರ್ಪಡೆ ಮಾಡಿ ಆದೇಶಿಸಿದ್ದು ತಮಗೂ ತಿಳಿದ ವಿಷಯವಾಗಿರುತ್ತದೆ. ಉಲ್ಲೇಖ-2 ರಲ್ಲಿನ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 185 ಬಿಸಿಎ 2018, ದಿನಾಂಕ: 13.07.2018 ರಲ್ಲಿ "ಕಾಡುಗೊಲ್ಲ" "ಹಟ್ಟಿಗೊಲ್ಲ" ಜಾತಿಯ ಹೆಸರನ್ನು ಕಂದಾಯ ಇಲಾಖೆಯ ನಾಡಕಛೇರಿಯ ಜಾಲತಾಣದ ಪ್ರವರ್ಗ-1 ಜಾತಿಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ಆದೇಶಿಸಿರುತ್ತದೆ.

ರಿ. ನಂ. ಡಿಆರ್‌ಬಿ4/ಎಸ್‌ಓಆರ್/215/2020-2021 Reg. No. DRB4/SOR/215/2020-2021

# ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ (ರಿ)

# KARNATAKA STATE KADUGOLLARA SANGHA (R)

ಕೇಂದ್ರ ಕಛೇರಿ : ನಂ. 2, ದೊಡ್ಡಣ್ಣ ಬಿಲ್ಡಿಂಗ್, ಅನಿಬೆಸೆಂಟ್ ಸ್ಕೂಲ್ ಅಡ್ಡರಸ್ತೆ, ದೊಡ್ಡಗೊಲ್ಲರಹಟ್ಟಿ, ಮಾಗಡಿ ಮುಖ್ಯರಸ್ತೆ, ನೈಸ್‌ರೋಡ್ ಜಂಕ್ಷನ್, ವಿಶ್ವನೀಡಂ ಅಂಚೆ, ಯಶವಂತಪುರ ಹೋಬಳಿ, ಬೆಂಗಳೂರು - 560 091.

Head Office: No. 2, Dodddanna Building, Anibesant School Cross Road, Dodda Gollarahatti, Magadi Main Road, Nice Road Junction, Vishwaneedam Post, Yeshwanthapura Hobli, Bengaluru - 560 091.

E-mail : krkgsangha@gmail.com

ಅಧ್ಯಕ್ಷರು / President
ಶ್ರೀ ರಾಜಣ್ಣನವರು / Sri Rajanna
Mob.: 97413 35250

ಪ್ರಧಾನ ಕಾರ್ಯದರ್ಶಿ / General Secretary
ಶ್ರೀ ದೇವರಾಜು ಎಂ.ಎಸ್. / Sri Devaraju M S
Mob.: 99450 77979

Ref.: Date.:

ಪ್ರಸ್ತುತ "ಕಾಡುಗೊಲ್ಲ" "ಹಟ್ಟಿಗೊಲ್ಲ" ಜಾತಿಗಳನ್ನು ಸರ್ಕಾರವು ಪ್ರವರ್ಗ-1 ರಡಿಯಲ್ಲಿ ಪ್ರತ್ಯೇಕ ಜಾತಿ ಎಂಬುದಾಗಿ ಗುರುತಿಸಿ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ಆದೇಶಿಸಿದ್ದು, ಸದರಿ ಜನಾಂಗದವರಿಗೆ ಜಿಪಂ ತಾಪಂ ಸೇರಿದಂತೆ ನಗರ ಸ್ಥಳೀಯ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ **ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ ಪಿ-5 ಜಿಪಸ 95(1), ಬೆಂಗಳೂರು, ದಿನಾಂಕ: 13.01.1995**, ರನ್ವಯ ಚುನಾವಣಾ ಗೆಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-ಎ & ಬಿ ಚುನಾವಣಾ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ. ಈ ತಾಂತ್ರಿಕ ಕಾರಣಗಳಿಂದ ಕಾಡುಗೊಲ್ಲ / ಹಟ್ಟಿಗೊಲ್ಲ ಜನಾಂಗದ ಅಭ್ಯರ್ಥಿಗಳು ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಚುನಾವಣೆಗೆ ಸ್ಪರ್ಧೆ ಮಾಡುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ.

ಆದ್ದರಿಂದ ಈಗಾಗಲೇ ಪ್ರವರ್ಗ-1 ರಡಿಯಲ್ಲಿ "ಕಾಡುಗೊಲ್ಲ" "ಹಟ್ಟಿಗೊಲ್ಲ" ಜಾತಿ ಪ್ರಮಾಣ ಪತ್ರವನ್ನು ಪಡೆದಿರುವ ಅಭ್ಯರ್ಥಿಗಳಿಗೆ, ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಚುನಾವಣೆಗೆ ಸ್ಪರ್ಧಿಸುವ ಉದ್ದೇಶಕ್ಕಾಗಿ, ಜಾತಿ ಪಟ್ಟಿಯಲ್ಲಿ "ಕಾಡುಗೊಲ್ಲ" "ಹಟ್ಟಿಗೊಲ್ಲ" ಎಂಬ ಪದಗಳನ್ನು ಚುನಾವಣಾ ಗೆಜೆಟ್‌ನಲ್ಲಿ ಸೇರ್ಪಡೆಗೊಳಿಸಿ, ಹಿಂದುಳಿದ ವರ್ಗಗಳ ಪ್ರವರ್ಗ-ಎ&ಬಿ (ಬಿಸಿಎಂ-ಎ)ರ ಅಡಿಯಲ್ಲಿ ಜಾತಿ ಪ್ರಮಾಣ ಪತ್ರವನ್ನು ನೀಡಲು ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನವನ್ನು ನೀಡಲು ತಮ್ಮಲ್ಲಿ ಕೋರಲಾಗಿದೆ.

ಇಂತಿ ತಮ್ಮ ನಂಬುಗೆಯ

(ರಾಜಣ್ಣ)
PRESIDENT
KARNATAKA RAJYA KADU GOLLARA SANGHA